KATK010033472020

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.205/2020**

ಪ್ರಾ.ಸಾ. : **5**

ದೋ.ಸಾ. : **2**

ದಿ.**10.12.2025**

ಹೆಸರು : ಮೋಹನ್ ಕುಮಾರ್ ಜಿ.ವಿ.

ತಂದೆಯ ಹೆಸರು : ಲೇಟ್ ಪಿ.ವೀರಭದ್ರಯ್ಯ

ವಯಸ್ಸು : **50** ವರ್ಷ

ಉದ್ಯೋಗ : ತಹಸೀಲ್ದಾರ್, ತಿಪಟೂರು

ವಾಸಸ್ಥಳ : ತಿಪಟೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ದಿ.18.11.2019 ರಿಂದ 25.11.2022 ರವರೆಗೆ ನಾನು ತುಮಕೂರು ತಾಲ್ಲೂಕು ತಹಸೀಲ್ದಾರ್ ಆಗಿ ಕೆಲಸ ನಿರ್ವಹಿಸಿರುತ್ತೇನೆ.
2. ದಿ.25.06.2020 ರಂದು ಸಂಜೆ 4.30 ಗಂಟೆಗೆ ನಾನು ನನ್ನ ಕಚೇರಿಯಲ್ಲಿದ್ದಾಗ ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯ ಪಿಎಸ್ಐ ರವರು ಒಂದು ಪತ್ರವನ್ನು ನೀಡಿ, ಅಹೋಬಲ ಅಗ್ರಹಾರದ ದೊಡ್ಡತಿಮ್ಮಯ್ಯನವರು ತನ್ನ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿ, ತಿಪಟೂರಿಗೆ ಹೋಗುವಾಗ ಸಿಕ್ಕಿ ಬಿದ್ದಿದ್ದಾರೆ, ಆ ಬಗ್ಗೆ ಒಬ್ಬ ಪತ್ರಾಂಕಿತ ಅಧಿಕಾರಿ ಮತ್ತು ಒಬ್ಬ ಪಂಚರನ್ನು ಕಳುಹಿಸಬೇಕೆಂದು ಕೋರಿಕೆ ಸಲ್ಲಿಸಿರುತ್ತಾರೆ. ನನಗೆ ಕಳುಹಿಸಿದ ಆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ27 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ27(ಎ) ಎಂದು ಗುರುತಿಸಲಾಯಿತು.
3. ಆ ಪತ್ರ ನೀಡಿದ ಆಧಾರದ ಮೇಲೆ ನಾನು ನಮ್ಮ ಕಚೇರಿಯ ಸಿಬ್ಬಂದಿಯವರಾದ ಪ್ರಥಮ ದರ್ಜೆ ಸಹಾಯಕರಾದ ಚಂದ್ರಕಾಂತ್ ಮತ್ತು ದ್ವಿತೀಯ ದರ್ಜೆ

ಸಹಾಯಕರಾದ ಚೇತನ್ ಶಿವುರವರನ್ನು ಜೊತೆಯಲ್ಲಿ ಕರೆದುಕೊಂಡು ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ, ಅಲ್ಲಿಂದ ಪೋಲೀಸರ ಜೊತೆಗೆ ಅಹೋಬಲ ಅಗ್ರಹಾರ ಗ್ರಾಮದ ದೊಡ್ಡತಿಮ್ಮಯ್ಯನವರ ತೋಟದ ಬಳಿ ಹೋದೆವು. ಅಲ್ಲಿ ಪಿಎಸ್‌ಐ ಮತ್ತು ಪೋಲೀಸ್ ಸಿಬ್ಬಂದಿಯವರು ಒಬ್ಬ ವ್ಯಕ್ತಿಯನ್ನು ಹಿಡಿದುಕೊಂಡಿದ್ದರು. ಆ ಸ್ಥಳದಲ್ಲಿ ಅವರನ್ನು ವಿಚಾರಿಸಿದಾಗ ಅವರ ಹೆಸರು ದೊಡ್ಡತಿಮ್ಮಯ್ಯ ಎಂದು ಹೇಳಿದರು. ನಾವು ಸ್ಥಳಕ್ಕೆ ಹೋಗಿ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ಪಡೆದು, ನಂತರ ಪರಸ್ಪರ ನಮ್ಮ ಅಂಗಶೋಧನೆಯನ್ನು ಮಾಡಿಕೊಂಡೆವು. ಅಂಗಶೋಧನೆ ಜ್ಞಾಪನವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ28 ಎಂದು ಗುರುತಿಸಲಾಯಿತು. ಆ ದಿನ ಮಳೆ ಇದ್ದುದರಿಂದ ಮತ್ತು ಕಣ್ತಪ್ಪಿನಿಂದ ನಾನು ಸಹಿ ಮಾಡಿಲ್ಲ.

**4.** ಸಾಯಂಕಾಲ 6.15 ಗಂಟೆಗೆ ಆ ವ್ಯಕ್ತಿಯನ್ನು ನಿನ್ನ ಬಳಿ ಮಾದಕ ವಸ್ತು ಇದೆಯೇ, ನಿನ್ನ ಅಂಗಶೋಧನೆ ಮಾಡಬಹುದೇ ಎಂದು ಕೇಳಿದಾಗ ಆತ ಒಪ್ಪಿಗೆಯನ್ನು ಸೂಚಿಸಿರುತ್ತಾನೆ. ನಿನ್ನ ಅಂಗಶೋಧನೆಯನ್ನು ಮ್ಯಾಜಿಸ್ಟ್ರೇಟ್ ಸಮಕ್ಷಮ ಮಾಡಿಸಬೇಕೇ ಅಥವಾ ನಾನೇ ಪತ್ರಾಂಕಿತ ಅಧಿಕಾರಿಯಾಗಿ ಅಂಗಶೋಧನೆ ಮಾಡಬಹುದೇ ಎಂದು ಕೇಳಿದಾಗ ನೀವೇ ಅಂಗಶೋಧನೆ ಮಾಡಬಹುದು ಎಂದು ಹೇಳಿದನು. ಅಂಗಶೋಧನಾ ಜ್ಞಾಪನಕ್ಕೆ ಆರೋಪಿ ಸಹಿ ಮಾಡಿರುತ್ತಾನೆ. ಆ ಸಹಿಯನ್ನು ನಿಶಾನೆ ಪಿ28(ಎ) ಎಂದು ಗುರುತಿಸಲಾಯಿತು. ದೊಡ್ಡತಿಮ್ಮಯ್ಯನನ್ನು ತಪಾಸಣೆ ಮಾಡಿದಾಗ ಆತನ ಕೈಯಲ್ಲಿ ಒಂದು ಚೀಲ ಇತ್ತು. ಆ ಚೀಲದಲ್ಲಿ ಗಾಂಜಾದ ಹಸಿ ಗಿಡಗಳು ಇದ್ದವು. ಆತನ ಕೈಯಲ್ಲಿದ್ದ ಚೀಲದಲ್ಲಿರುವ ಗಾಂಜಾ ಗಿಡಗಳನ್ನು ನಾನೇ ಬೆಳೆಸಿದ್ದು ಎಂದು ಆತ ಹೇಳಿದನು. ಆ ಗಿಡಗಳ ಸೊಪ್ಪುಗಳನ್ನು ನಾನು ಮತ್ತು ಪಿಎಸ್‌ಐ ಕೈಯಲ್ಲಿ ಉಜ್ಜಿ ವಾಸನೆ ನೋಡಿದಾಗ ಘಾಟು ವಾಸನೆ ಬಂದಿದ್ದರಿಂದ ಅವು ಗಾಂಜಾ ಗಿಡಗಳು ಎಂದು ಖಾತ್ರಿಯಾಯಿತು. ಆ ಗಿಡಗಳಲ್ಲಿ ಗಾಂಜಾ ಸೊಪ್ಪು, ರೆಂಬೆ, ಬೀಜ ಮತ್ತು ತೆನೆ ಇದ್ದವು. ಒಟ್ಟು 5 ಗಿಡಗಳು ಇದ್ದವು. ಈ ರೀತಿಯಾಗಿ ತಪಾಸಣೆ ಮಾಡಿದಾಗ ಮಳೆ ಬಂದಿದ್ದರಿಂದ 50 ಮೀಟರ್ ದೂರದಲ್ಲಿರುವ ಆರೋಪಿಯ ಮನೆಯ ಕಡೆಗೆ ಹೋಗಿ ಅಲ್ಲಿ ಆ ಗಿಡಗಳನ್ನು ತೂಕ ಮಾಡಿದೆವು. ಆ ಮನೆಯ ಮುಂದುಗಡೆ ಚಪ್ಪರದ ಅಡಿಯಲ್ಲಿ ಲೈಟ್ ಬೆಳಕಿನ ಸಹಾಯದಿಂದ ತೂಕ ಮಾಡಿದೆವು. ಪೋಲೀಸರೇ ತಂದಿದ್ದ ತೂಕದ

ಯಂತ್ರದಿಂದ ತೂಕ ಮಾಡಿದೆವು. ಚೀಲದ ಸಮೇತ ತೂಕ ಹಾಕಿದಾಗ 4 ಕೆಜಿ 200 ಗ್ರಾಂ ತೂಕ ಇತ್ತು. ಚೀಲ ತೆಗೆದು ತೂಕ ಮಾಡಿದಾಗ 3 ಕೆಜಿ 900 ಗ್ರಾಂ ತೂಕ ಇತ್ತು. ನಂತರ ಆ ಗಾಂಜಾ ಗಿಡಗಳನ್ನು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯಿಯನ್ನು ದಾರದಿಂದ ಕಟ್ಟಿ ಎಸ್ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗಿನ ಸಹಾಯದಿಂದ ಸೀಲ್ ಮಾಡಲಾಯಿತು.

**5.** ನಂತರ ಆರೋಪಿ ದೊಡ್ಡತಿಮ್ಮಯ್ಯ ಆ ಗಾಂಜಾ ಗಿಡಗಳನ್ನು ಬೆಳೆದಿದ್ದ ಜಾಗಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಆತನ ಜಮೀನಿನ ಬದುವಿನ ಪಕ್ಕದ ಕಾಲುವೆ ಪಕ್ಕದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದೇನೆಂದು ಹೇಳಿದನು. ಅಲ್ಲಿ ಗಾಂಜಾ ಗಿಡಗಳನ್ನು ಕಿತ್ತಿದ್ದ ಗುಂಡಿಗಳು ಕಂಡುಬಂದವು. ಆ ದಿನ ಸಿಕ್ಕ ದೊಡತಿಮ್ಮಯ್ಯ ಈಗ ನ್ಯಾಯಾಲಯದ ಮುಂದೆ ಇದ್ದಾನೆ. ನಂತರ ಸ್ಥಳದಲ್ಲಿ ಮಹಜರ್ ಮಾಡಲಾಯಿತು. ಆ ದಿನ ಮಾಡಿದ ಮಹಜರನ್ನು ನಿಶಾನೆ ಪಿ1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಸಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಮಹಜರ್ ಮಾಡುವಾಗ ತೆಗೆದ ಫೋಟೋಗಳನ್ನು ನಿಶಾನೆ ಪಿ4 ರಿಂದ 23 ಎಂದು ಗುರುತಿಸಲಾಗಿದೆ. ಮಹಜರ್ ಇರುವ ಸಿಡಿಯನ್ನು ನಿಶಾನೆ ಪಿ3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು :**

(ಈ ಹಂತದಲ್ಲಿ ಆರೋಪಿ ಪರ ವಕೀಲರಾದ ಶ್ರೀ.ಟಿ.ಎಸ್.ಕೃಷ್ಣಶಾಸ್ತ್ರಿಯವರು ವಕಾಲತ್ ನಿಂದ ನಿವೃತ್ತಿಯಾಗುತ್ತೇನೆಂದು ಮೆಮೋ ಸಲ್ಲಿಸಿರುವುದರಿಂದ ವಕಾಲತ್ ನಿಂದ ನಿವೃತ್ತಿಯಾಗಲು ಅನುಮತಿ ನೀಡಲಾಯಿತು. ಆರೋಪಿ ತನಗೆ ಸರ್ಕಾರದಿಂದ ವಕೀಲರನ್ನು ನೇಮಕ ಮಾಡಿಕೊಡಬೇಕೆಂದು ಕೋರಿಕೆ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು